# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
## ಉತ್ತರ ಕನ್ನಡ : ಕಾರವಾರ
### ಸ್ಪೆಷಲ್ ಕೇಸ್ ನಂ. 27/2020

**ದೋ.ಸಾ. : 1 ಫ್ರಾ.ಸಾ. : 1**

| | | |
|---|---|---|
| ಸಾಕ್ಷಿಯ ಹೆಸರು | : | ಕಾಸಿಂ ಸಾಬ್ |
| ತಂದೆಯ ಹೆಸರು | : | ಜುಮ್ಮಾ ಸಾಬ್ |
| ವಯಸ್ಸು | : | 36 ವರ್ಷ |
| ಕೆಲಸ | : | ರೈತಾಬಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಚಾ.ಸಾ.7 ಮಾಬೂಬಿ ನನ್ನ ತಾಯಿ, ಚಾ.ಸಾ.8 ಮಹಮ್ಮದ್ ಹನೀಫ್, ಚಾ.ಸಾ.9 ಮುಸ್ತಾಕ್, ಚಾ.ಸಾ.10 ರಜಾಕ್ ನನ್ನ ತಮ್ಮಂದಿರು. ನಾವು ಪರಿಶಿಷ್ಟ ಪಂಗಡಗಳ (ಸಿದ್ದಿ[ಉತ್ತರ ಕನ್ನಡ]) ಜಾತಿಗೆ ಸೇರಿದವರು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ, ಅವರು ನಮ್ಮ ಸಂಬಂಧಿಕರು. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದದ್ದು ಇರುವುದಿಲ್ಲ, ಹಾಗೂ ಮದುವೆಯ ಊಟದ ಕುರಿತಂತೆ 1 ಮತ್ತು 3 ನೇ ಆರೋಪಿತರು ಚಾ.ಸಾ.9 ರವರ ಜೊತೆಗ ಜಗಳ ಮಾಡಿರುವುದಿಲ್ಲ. 1 ನೇ ಆರೋಪಿತರು ನನ್ನ ತಮ್ಮ ಚಾ.ಸಾ.9 ರವರಿಗೆ ಕೆನ್ನೆಯ ಮೇಲೆ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನ್ನ ತಮ್ಮ ಚಾ.ಸಾ.8 ರವರಿಗೆ ಕೈಯಿಂದ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನ್ನ ತಾಯಿ ಚಾ.ಸಾ.7 ರವರಿಗೆ ಹೊಡೆದಿರುವುದಿಲ್ಲ ಮತ್ತು ಮಾನಕ್ಕೆ ಕುಂದುಂಟುಪಡಿಸಿಲ್ಲ. ನನ್ನ ತಾಯಿ ಚಾ.ಸಾ.7 ಹಾಗೂ ನನ್ನ ಸಹೋದರ ಚಾ.ಸಾ.8 ಬೈಕಿನ ಮೇಲೆ ಹೋದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಪೊಲೀಸರು ಬಂದಿದ್ದು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಈಗ ಸಾಕ್ಷಿಗೆ ತೋರಿಸಿದ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರು ಆಗಿದ್ದು, ಅದನ್ನು ನಿ.ಪಿ.1

ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ1 ರಲ್ಲಿರುವ ವಿವರಗಳು ನನಗೆ ಗೊತ್ತಿಲ್ಲ . ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ.

2. ಪೊಲೀಸರಿಗೆ ನಾನು ಯಾವುದೇ ಜಾಗ ತೋರಿಸಿಲ್ಲ, ಹಾಗೂ ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ, ಹಾಗೂ ನಕಾಶೆಯನ್ನು ತಯಾರಿಸಿಲ್ಲ, ಛಾಯಚಿತ್ರಗಳನ್ನು ತೆಗೆದಿಲ್ಲ ಹಾಗೂ ಪೊಲೀಸರ ಮುಂದೆ ನಾನು ಯಾವುದೇ ಬಟ್ಟೆಯನ್ನು ಹಾಜರುಪಡಿಸಿಲ್ಲ. ಈಗ ತೋರಿಸುತ್ತಿರುವ ದಾಖಲೆಗಳ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳು ಪಂಚನಾಮೆ ಮತ್ತು ನಕಾಶೆಗಳಾಗಿದ್ದು, ಅವುಗಳನ್ನು ನಿ.ಪಿ.2 ಮತ್ತು 3 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ನಿ.ಪಿ.2 ಮತ್ತು 3 ರಲ್ಲಿರುವ ವಿವರಗಳು ನನಗೆ ಗೊತ್ತಿಲ್ಲ. ಈಗ ತೋರಿಸಿತ್ತಿರುವ ಛಾಯ ಚಿತ್ರದಲ್ಲಿ ನಾನು ಇದ್ದೇನೆ, ಸದರಿ ಛಾಯಚಿತ್ರವನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಅದನ್ನು ಯಾರು, ಯಾವಾಗ ಮತ್ತು ಏಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

3. ದಿನಾಂಕ 14.04.2019 ರಂದು ನನ್ನ ಚಿಕ್ಕಮ್ಮನ ಮಗಳ ಮದುವೆಗೆ ನಾನು ಹಾಗೂ ನನ್ನ ತಮ್ಮಂದಿರಾದ ಚಾ.ಸಾ. 8 ರಿಂದ 10 ಹೋಗಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ಊಟದ ಸಮಯದಲ್ಲಿ 1 ಮತ್ತು 3 ನೇ ಆರೋಪಿತರು ಹಾಗೂ ನನ್ನ ತಮ್ಮ ಚಾ.ಸಾ.9 ರವರ ನಡುವೆ ಊಟದ ಪ್ಲೇಟಿನ ವಿಚಾರದಲ್ಲಿ ಜಗಳ ಆಗಿತ್ತು ಎಂದರೆ ಸರಿಯಲ್ಲ. ದಿನಾಂಕ 15.04.2019 ರಂದು ರಾತ್ರಿ ನನ್ನ ತಮ್ಮ ಚಾ.ಸಾ.9, ನನ್ನ ಚಿಕ್ಕಮ್ಮ ಫಾತಿಮಾ ರವರ ಮನೆಗೆ ಹೋದಾಗ, ಅಲ್ಲಿ 1 ನೇ ಆರೋಪಿತನು ಚಾ.ಸಾ.4 ಶಬ್ಬೀರ್ ಇವರೊಂದಿಗೆ ಮಾತನಾಡುತ್ತಿದ್ದಾಗ ಚಾ.ಸಾ.9 ರವನ್ನು ನೋಡಿ ಅವನಿಗೆ "ರಾಂಡಕೇ ಬೇಟೆ " ಎಂದು ಬೈದು ಕೆನ್ನೆಯ ಮೇಲೆ ಹೊಡೆದ ಎಂದರೆ ಸರಿಯಲ್ಲ ಆಗ ನಾನು ಹಾಗೂ ನನ್ನ ತಾಯಿ ಚಾ.ಸಾ.7 ಮತ್ತು ನನ್ನ ತಮ್ಮ ಚಾ.ಸಾ.

10 ಸೇರಿ ಜಗಳದ ಬಗ್ಗೆ 1 ನೇ ಆರೋಪಿತನಿಗೆ ಕೇಳುತ್ತಿದ್ದಾಗ ಅಲ್ಲಿಯೇ ಇದ್ದ 2 ಮತ್ತು 3 ನೇ ಆರೋಪಿತರು ನಮಗೆ ದೂಡಾಡಿದರು ಎಂದರೆ ಸರಿಯಲ್ಲ ಹಾಗೂ 1 ನೇ ಆರೋಪಿತರು ನನ್ನ ತಮ್ಮ ಚಾ.ಸಾ.8 ರವರ ಮೂಗಿಗೆ ಮುಷ್ಟಿಯಿಂದ ಹೊಡೆದರು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸೇರಿ ನನ್ನ ತಾಯಿ ಚಾ.ಸಾ.7 ರವರಿಗೆ ದೂಡಾಡಿ, ಆಕೆಯ ಕೈ ತಿರುಗಿಸಿ ಹೊಡೆದು, ಆಕೆಯ ಮಾನಕ್ಕೆ ಕುಂದುಂಟಾಗುವಂತೆ ಮಾಡಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಹೋದ ನನಗೆ 1 ರಿಂದ 3 ನೇ ಆರೋಪಿತರು ಸೇರಿ ಕೈಯಿಂದ ಹೊಡೆದು ನಾನು ಧರಿಸಿದ ಅಂಗಿಯನ್ನು ಹರಿದರು ಎಂದರೆ ಸರಿಯಲ್ಲ. ಪೆಟ್ಟು ತಿಂದ ನನ್ನ ತಮ್ಮ ಚಾ.ಸಾ.8 ಹಾಗೂ ನನ್ನ ತಾಯಿ ಚಾ.ಸಾ 7 ರವರಿಗೆ ಉಪಚಾರದ ಕುರಿತು ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಚಾ.ಸಾ.10 ರವರು 108 ವಾಹನದಲ್ಲಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನ್ನ ತಮ್ಮ ಹಾಗೂ ತಾಯಿ ಮೋಟಾರ್ ಬೈಕ್ ಮೇಲೆ ಹೋಗುತ್ತಿದ್ದಾಗ ಬಿದ್ದು ಪೆಟ್ಟು ಮಾಡಿಕೊಂಡು ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

4. ದಿನಾಂಕ 17.04.2019 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನು ಸ್ವತಃ ಹಾಜರಿದ್ದು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ, ಅಲ್ಲಿ ನಿ.ಪಿ.2 ರಂತೆ ಪಂಚನಾಮೆ ಮಾಡಿ, ನಿ.ಪಿ.3 ರಂತೆ ನಕಾಶೆ ತಯಾರಿಸಿ, ನಿ.ಪಿ.4 ರಂತೆ ಛಾಯಚಿತ್ರ ತೆಗೆದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನಾನು ಪಂಚನಾಮೆ ಮಾಡುವ ಸಮಯದಲ್ಲಿ ಹಾಜರುಪಡಿಸಿದ್ದೆ ಎಂದರೆ ಸರಿಯಲ್ಲ.

5. ಈ ಪ್ರಕರಣದ 1 ನೇ ಆರೋಪಿತನು ನನ್ನ ಹಾಗೂ ನನ್ನ ಸಹೋದರನಾದ ಚಾ.ಸಾ.8 ಮತ್ತು 9 ಹಾಗೂ ಒರ್ವ ಮಹಮ್ಮದ್ ತಂದೆ ಕರೀಂ ಸಾಬ್ ಮುಜಾವರ್ ಇವರ ಮೇಲೆ ದೂರು ದಾಖಲಿಸಿದ್ದು, ಅದು ಎಸ್.ಸಿ ನಂಬರ 38/2022 ಆಗಿದ್ದು, ಅದು ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ ಮತ್ತು ಆ ಪ್ರಕರಣದಲ್ಲಿ ಈ ಪ್ರಕರಣದ 1 ರಿಂದ 3 ನೇ ಆರೋಪಿತರು ನಮ್ಮ ಪರವಾಗಿ ಪ್ರತಿಕೂಲ ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಆದ ಕಾರಣ ನಾನು ಆರೋಪಿತರ ವಿರುದ್ಧ ಪಿರ್ಯಾದಿಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ  ಆರೋಪಿತರ ಪರ ಶ್ರೀಮತಿ ಡಿ.ಡಿ.ಕೆ ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ